ಎನ್ನುವಷ್ಟರಲ್ಲಿ ಬಾಲನ್‌ನ ರಾಗದ ಧಾಟಿ ಗಾಳಿಯಲ್ಲಿ ತೇಲಿ ಕಿವಿಗೆ ತೂರಿ ಬಂದಾಗ ಮನಸ್ಸಿಗೆ ಹಾಯ್ ಎನಿಸಿತು. ಜೊತೆಗೆ ಅವನ ಮೇಲೆ ವಿಪರೀತ ಕೋಪವೂ ಬಂದಿತ್ತು. ಅಲ್ಲ... ಅವನು ಪ್ರತಿದಿನವೂ ಬರಲೇಬೇಕೆಂದು ನಾವೇಕೆ ಅಪೇಕ್ಷೆಪಡಬೇಕು... ಅದು ಅವನ ಇಚ್ಛೆಗೆ ಬಿಟ್ಟದ್ದು. ಅವನೇನಾದರೂ ಬಂದೇ ಬರುತ್ತೇನೆಂದು ಕರಾರು ಮಾಡಿಕೊಂಡಿದ್ದಾನೆಯೆ... ಅವನಿಗೂ ಊರು, ತಿರುಗಾಟ, ವೈಯಕ್ತಿಕವಾದುದೇನೂ ಇರುವುದಿಲ್ಲವೆ ಎಂದೆಲ್ಲಾ ಯೋಚಿಸುತ್ತಲೇ ತರಕಾರಿ ಬುಟ್ಟಿ ಹಿಡಿದು ಬಂದಿದ್ದೆ.

ನನ್ನ ನೋಟದಲ್ಲಿದ್ದ ಭಾವವನ್ನು ಅರ್ಥ ಮಾಡಿಕೊಂಡವನಂತೆ ತುಸು ನಾಚಿಕೆಯಿಂದಲೇ ಆಹ್ವಾನ ಪತ್ರಿಕೆಯನ್ನು ಕೊಡುತ್ತಾ, 'ಮದುವೆ ಗೊತ್ತಾಗಿದೆ ಅಮ್ಮಾವರೆ... ಚೆನ್ನೈನಲ್ಲಿ... ಖಂಡಿತ ಬರಬೇಕು' ಎಂದು ಕರೆಯುವಾಗ ಅವನನ್ನೊಮ್ಮೆ ದಿಟ್ಟಿಸಿದ್ದೆ. ಬಾಲನ್ ಮದುವೆ ವಯಸ್ಸಿಗೆ ಬಂದುಬಿಟ್ಟಿದ್ದಾನೆಯೆ... ನಮಗೆಂದೂ ಹಾಗೆ ಅನಿಸಿರಲೇ ಇಲ್ಲವಲ್ಲ... ಅಷ್ಟೇಕೆ... ತರಕಾರಿ ವ್ಯಾಪಾರದಾಚೆಗೂ ಅವನಿಗೂ ಸ್ವಂತದ ಬದುಕು ಎಂಬುದಿದೆ ಎಂದೇ ಪರಿಗಣಿಸಿಲ್ಲವೆ... ಹೀಗೆ ಯೋಚನೆಗಳ ಸುತ್ತಾಟದ ನಡುವೆಯೇ, 'ಯಾರು ಹುಡುಗಿ... ಏನು ಮಾಡುತ್ತಿದ್ದಾಳೆ...' ಎಂದೆಲ್ಲಾ ಪ್ರಶ್ನೆಗಳ ಮಾಲೆಯನ್ನೇ ಹಾಕಿದ್ದೆ.

'ಅವಳದ್ದು ಬಿ.ಎ ಆಗಿದೆ. ಪಾಪ... ಏನೋ ತೊಂದರೆ ಆಗಿದೆಯಂತೆ. ನಮ್ಮ ತಾತನ ದೂರದ ಸಂಬಂಧವಂತೆ. ಅವರ ಕಡೆಯವರೇ ಬಂದು ನನ್ನನ್ನು ಕೇಳಿಕೊಂಡರು. ನಾನೂ ಒಪ್ಪಿಕೊಂಡೆ ಅಮ್ಮಾವ್ರೆ.'

ಅವನು ಹೇಳಿದಾಗ ಆಹ್ವಾನ ಪತ್ರಿಕೆಯತ್ತ ದೃಷ್ಟಿ ಹಾಯಿಸಿದ್ದೆ. ಕೇವಲ ಎರಡೇ ವಾರ ಇದೆ ಮದುವೆಗೆ. 'ಹಾಗಾದ್ರೆ ನೀನು ಇನ್ಮೇಲೆ ತರಕಾರಿ ತರುವುದಿಲ್ಲವಾ?' ಬಾಲನ್ ಖುಷಿಯಿಂದ ಹೇಳುತ್ತಿರುವಾಗ ನನ್ನದು ಇದೆಂತಹ ಅಸಂಗತ ಪ್ರಶ್ನೆ ಎನ್ನಿಸಿ ಕೂಡಲೆ ಸರಿ ಮಾಡಿಕೊಂಡು ಕೇಳಿದ್ದೆ: 'ಮದುವೆ ತಯಾರಿ ಜೋರಾಗಿ ನಡೆಯುತ್ತಿರಬಹುದಲ್ಲವೆ.'

'ಇನ್ನೊಂದು ವಾರ ತರಕಾರಿ ತಗೊಂಡು ಬರ್ತೀನಿ... ಮದುವೆಗೆ ಖಂಡಿತ ಬನ್ನಿ ಅಮ್ಮಾವ್ರೆ.' ಬಾಯಿ ತುಂಬಾ ಕರೆದವನ ಮೊಗದಲ್ಲಿ ಸಂತಸ ತುಂಬಿ ತುಳುಕುತ್ತಿತ್ತು. ಚಂದದ ಭವಿಷ್ಯದ ಬಗ್ಗೆ ಕನಸುಗಳು ನೂರಾರು ಇದ್ದಾವು. ವೃತ್ತಿ ಯಾವುದೇ ಇರಬಹುದು. ಕನಸಿನ ಹಕ್ಕಿ ಗರಿಗೆದರಲು ಮನಸ್ಸು ಅಣಿಯಾಗಿದ್ದರಾಯಿತು. ಮುಂದೆ ಬೇರೆ ವೃತ್ತಿಯನ್ನು ಕೈಗೊಂಡಾನು.

ಮದುವೆಯಾಗಲಿರುವ ಹುಡುಗಿ ಓದಿದ್ದಾಳೆ ಎಂದು ಹೇಳುತ್ತಿದ್ದಾನೆ. ಆಗಲಿ... ಚೆನ್ನಾಗಿರಲಿ... ನಮ್ಮ ಕಣ್ಮುಂದೆ ಓಡಾಡಿಕೊಂಡಿದ್ದ ಹುಡುಗ. ಎಂತಹ ನಿಯತ್ತು. ಎಂದೂ ಸಾಲ ಕೇಳಿದವನಲ್ಲ. ತೂಕದಲ್ಲಿ ಮೋಸವಿಲ್ಲ.

'ಉಳಿದಿರುವುದು ಚೆನ್ನಾಗಿಲ್ಲ ಅಮ್ಮಾವ್ರೆ. ನಾಳೆ ಬೇರೆ ತಂದ್ಕೊಡ್ತೀನಿ,' ಎನ್ನುವಂತಹ ಪ್ರಾಮಾಣಿಕತೆ... ಬರುವ ಆ ಹುಡುಗಿ ಅವನ ಬಾಳಿಗೆ ಬೆಳಕಾಗಲಿ ಎಂದು ಮನಸಾ ಹಾರೈಸಿದೆ.

ಮದುವೆ ಆದಮೇಲೆ ಹೆಂಡತಿಯನ್ನು ಮನೆಗೆ ಕರೆದುಕೊಂಡು ಬರಬೇಕು ಎಂದಿದಕ್ಕೆ ಮುಖವೆಲ್ಲಾ ರಂಗಾಗಿಸಿಕೊಂಡು ಆಗಲಿ ಎಂಬಂತೆ ತಲೆಯಾಡಿಸಿದ್ದ. ಇನ್ನೂ ಹೆಚ್ಚು ಮಾತಿಗೆ ನಿಲ್ಲಿಸಿಕೊಂಡರೆ ಬಾಲನ್‌ಗೆ ಕಷ್ಟವಾದೀತು ಎಂದುಕೊಂಡು ಸಂಭಾಷಣೆಗೆ ವಿರಾಮ ಹಾಕಿದ್ದೆ.

ಅವನ ಮದುವೆಗೆ ಏನಾದರೂ ಉಡುಗೊರೆ ಕೊಡಬೇಕು. ಚೆನ್ನೈಗಂತೂ ಹೋಗುವುದಕ್ಕಾಗುವುದಿಲ್ಲ. ಬಂದ ಮೇಲೆ ಏನಾದರೂ... ಏನಾದರೂ ಅನ್ನುವುದಕ್ಕಿಂತ ನಗದು